ದಿನಾಂಕಃ 20-03-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಗಳ ಪರವಾಗಿ ಶ್ರೀ ಎಂ ಬಿ ಆರ್ ವಕೀಲರಿಂದ**

1. ನಾನು ಪಿ ಯುಸಿ ವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಈ ದಾವೆಯನ್ನು ನಮ್ಮಗೋಡೆಯನ್ನು ಪ್ರತಿವಾದಿಗಳು ಕೆಡವದಂತೆ ಕೋರಿ ಹಾಕಿರುತ್ತೇನೆ. ಸದರಿ ಗೋಡೆ ಇರುವ ಆಸ್ತಿಯ ಸಂಖ್ಯೆ 352. ಅದರಿ ವಿಸ್ತೀರ್ಣ 20 ಇಂಟು 9 ಅಡಿ ಇದೆ. ಸದರಿ ಆಸ್ತಿಯ ಚೆಕ್ಕುಬಂದಿ ಪೂರ್ವಕ್ಕೆ ನಾಗಮ್ಮನವರ ಮನೆ, ಪಶ್ಚಿಮಕ್ಕೆ ರತ್ನಮ್ಮನವರ ಮನೆ, ಉತ್ತರಕ್ಕೆ ನರಸಿಂಹಸ್ವಾಮಿ ದೇವಸ್ಥಾನ, ದಕ್ಷಿಣಕ್ಕೆ ಚರಂಡಿ ಮತ್ತು ರಸ್ತೆ ಇದೆ. ಸದರಿ ಆಸ್ತಿಯಲ್ಲಿ ನಾವು 25 ವರ್ಷಗಳಿಂದ ಮನೆ ಕಟ್ಟಿಕೊಂಡು ಇದ್ದೇವೆ. ಸದರಿ ಆಸ್ತಿ ನಮಗೆ ಪಂಚಾಯತಿಯಿಂದ ಮಂಜೂರಾತಿ ಆಗಿರುತ್ತದೆ. ಸದರಿ ಮಂಜೂರಾತಿ ಬಗ್ಗೆ ನ್ಯಾಯಾಲಯಕ್ಕೆ ಮಂಜೂರಾತಿ ಪತ್ರದ ದಾಖಲೆಗಳನ್ನು ಕೊಟ್ಟಿರುತ್ತೇನೆ. ಸಾಕ್ಷಿಗೆ ಈಗ ತನ್ನ ಪರವಾಗಿ ನಿಶಾನೆಗೊಳಪಟ್ಟ ದಾಖಲೆಗಳ ಪಟ್ಟಿಯನ್ನು ತೋರಿಸಲಾಗಿ ಸದರಿ ದಾಖಲೆಗಳಲ್ಲಿ ತಾನು ಹೇಳಿದಂತಹ ಯಾವುದೇ ಪತ್ರ ಇಲ್ಲದಿರುವುದನ್ನು ನೋಡಿ ಖಚಿತಪಡಿಸಿಕೊಂಡಿರುತ್ತಾರೆ. ಸದರಿ ದಾವಾಸ್ತಿ ವಾದಿಯ ಹೆಸರಿಗೆ ಮಂಜೂರಾಗಿರುತ್ತದೆ. ದಾವಾಸ್ತಿ ವಾದಿಯ ಹೆಸರಿಗೆ ಮಂಜೂರಾದ ಬಗ್ಗೆ ನನ್ನ ವಾದಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ.

2. ಪ್ರಸ್ತುತ ದಾವೆಯಲ್ಲಿ ಬರೆಸಿದ ಸಂಗತಿಗಳ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸರಿ. ನಾನು ಸಲ್ಲಿಸಿರುವ ಮುಖ್ಯ ವಿಚಾರಣಾ ಪ್ರ.ಪತ್ರದ ಕುರಿತು ನನಗೆ ಸಂಪೂರ್ಣ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ದಾವಾಸ್ತಿಯ ಮೇಲೆ ನಾನಾಗಲಿ ಅಥವಾ ವಾದಿಯಾಗಲಿ ಇ-ಸ್ವತ್ತು ಪಡೆದಿರುವುದಿಲ್ಲ. ನಾನು ಹಾಜಪಡಿಸಿರುವ ನಿಪಿ-3 ಮತ್ತು 4 ರಂತೆ ದಾವಾಸ್ತಿಯಲ್ಲಿ ಪ್ರಸ್ತುತ ಯಾವುದೇ ಮನೆ ಇಲ್ಲ ಎಂದರೆ ಸರಿಯಲ್ಲ. ನಿಪಿ-3 ಮತ್ತು 4 ರಲ್ಲಿ ಕಾಣಿಸುತ್ತಿರುವ ಗೋಡೆ ಪ್ರತಿವಾದಿಗೆ ಸೇರಿದ ಆಸ್ತಿ ಎಂದರೆ ಸರಿಯಲ್ಲ. ಸದರಿ ಗೋಡೆ ನಮ್ಮ ಆಸ್ತಿಗೆ ಸೇರಿದ್ದು ಎಂದು ನಾನು ಪಂಚಾಯತಿಯಿಂದ ಯಾವುದೇ ಅಳತೆಗಳನ್ನು ಮಾಡಿಸಿಲ್ಲ ಹಾಗೂ ಸದರಿ ಅಳತೆಯ ಕುರಿತು ನಾನು ಯಾವುದೇ ದಾಖಲೆಗಳನ್ನುಕೂಡ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸದರಿ

ಅಳತೆ ಕಾರ್ಯ ನ್ಯಾಯಾಲಯದಲ್ಲಿ ಪ್ರಸ್ತುತ ವಿವಾದಿತ ಜಾಗದ ಕುರಿತು ಹೂಡಿದ ದಾವೆ ವಿಚಾರಣೆಗೆ ಬಾಕಿ ಇರುವ ಕಾರಣ ಪಂಚಾಯತಿಯವರು ಅಳತೆ ಮಾಡಿ ದಾಖಲೆ ನೀಡಲು ನಿರಾಕರಿಸಿದ್ದು ಸದರಿ ವಿಚಾರದ ಕುರಿತು ನಿಪಿ-15 ರಂತೆ ದಾಖಲೆ ನೀಡಿರುತ್ತಾರೆ. ಸದರಿ ಅರ್ಜಿಯನ್ನು ನಾನು ಪಂಚಾಯತಿಗೆ 2024ರಲ್ಲಿ ಕೊಟ್ಟಿರುತ್ತೇನೆ. ಸದರಿ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸಾಕ್ಷಿಗೆ ಈಗ ತನ್ನ ಪರವಾಗಿ ನಿಶಾನೆಗೊಳಪಟ್ಟ ದಾಖಲೆಗಳ ಪಟ್ಟಿಯನ್ನು ತೋರಿಸಲಾಗಿ ಸದರಿ ದಾಖಲೆಗಳಲ್ಲಿ ತಾನು ಹೇಳಿದಂತಹ ಯಾವುದೇ ಅರ್ಜಿ ಇಲ್ಲದಿರುವುದನ್ನು ನೋಡಿ ಖಚಿತಪಡಿಸಿಕೊಂಡಿರುತ್ತಾರೆ.

3. ನಿಪಿ-13ರಲ್ಲಿ ನಮೂದಿಸಿದ ಚೆಕ್ಕುಬಂದಿಗೂ ದಾವಾಸ್ತಿಯ ಚೆಕ್ಕುಬಂದಿಗೂ ವ್ಯತ್ಯಾಸವಿದೆ ಎಂದರೆ ಸರಿಯಲ್ಲ. ಪ್ರತಿವಾದಿ ತಮ್ಮ ಆಸ್ತಿಯನ್ನು ನಾಗಮ್ಮ ಎನ್ನುವವರಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಖರೀದಿಸಿದ ಆಸ್ತಿಯಲ್ಲಿ ಪ್ರತಿವಾದಿಯೇ ಸ್ವಾಧೀನದಲ್ಲಿದ್ದಾರೆ ಎಂದರೆ ಸಾಕ್ಷಿ ನಮ್ಮ ಆಸ್ತಿಯಲ್ಲಿ ನಾವು ಇದ್ದೆವೆ ಎಂದು ನುಡಿಯುತ್ತಾರೆ.

4. ನಾನು ನನ್ನ ಪ್ರ.ಪತ್ರದಲ್ಲಿ ದಾವಾಸ್ತಿಯಲ್ಲಿ ಹುಲ್ಲು ಗುಡಿಸಿಲಿನ ಮನೆಯನ್ನು ಕಟ್ಟಿಕೊಂಡಿದ್ದೆವು ಎಂದು ನಮೂದಿಸಿದ್ದೆನೆ ಎಂದರೆ ಸರಿ. ಅದೇ ರೀತಿ ನನ್ನ ಮುಖ್ಯ ವಿಚಾರಣಾ ಪ್ರ.ಪತ್ರದ 3 ನೇ ಪ್ಯಾರದಲ್ಲಿ ಪ್ರತಿವಾದಿಯು ದಾವಾಸ್ತಿಯನ್ನು ಸುಮಾರು ವರ್ಷಗಳ ಹಿಂದೆ ದೊಡ್ಡಬ್ಬಿಗೆರೆ ಗ್ರಾಮ ಪಂಚಾಯತಿಯಿಂದ ನಮ್ಮ ತಂದೆಯಾದ ಸೋಮಶೇಖರಪ್ಪನವರಿಗೆ ಮಂಜೂರು ಮಾಡಿರುತ್ತಾರೆ ಎಂದು ನಮೂದಿಸಿರುತ್ತೇನೆ ಎಂದರೆ ಸಾಕ್ಷಿ ನಾನು ಬರೆಸಿಲ್ಲ ಎಂದು ನುಡಿಯುತ್ತಾರೆ. ಹಾಗಾಗಿ ನನ್ನ ಮುಖ್ಯ ವಿಚಾರಣಾ ಪ್ರ.ಪತ್ರದಲ್ಲಿ ಬರೆದ ಸಂಗತಿಗಳ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನನ್ನ ಪ್ರ.ಪತ್ರದಲ್ಲಿ ನನ್ನ ಜಾಗದಲ್ಲಿ ಪ್ರತಿವಾದಿ ಒತ್ತುವರಿ ಮಾಡಿಕೊಂಡು ಗೋಡೆಯನ್ನು ನಿರ್ಮಿಸಿರುತ್ತಾರೆ ಎಂದು ನಮೂದಿಸಿರುತ್ತೇನೆ ಎಂದರೆ ಸಾಕ್ಷಿ ನಾನು ಸದರಿ ಸಂಗತಿಯನ್ನು ಬರೆಸಿಲ್ಲ ಎಂದು ನುಡಿಯುತ್ತಾರೆ. ಹಾಗಾಗಿ ನನ್ನ ಮುಖ್ಯ ವಿಚಾರಣಾ ಪ್ರ.ಪತ್ರಕ್ಕೆ ಮಾಹಿತಿಯನ್ನು ನಾನು ನೀಡಿಲ್ಲ ಎಂದರೆ ಸಾಕ್ಷಿ ಮೌನವಾಗಿರುತ್ತಾರೆ. ನನ್ನ

ಮುಖ್ಯ ವಿಚಾರಣಾ ಪ.ಪತ್ರಕ್ಕೆ ನಾನು ಓದಿ ತಿಳಿದ ತರುವಾಯ ಸಹಿ ಮಾಡಿರುತ್ತೇನೆ ಎಂದರೆ ಸರಿ. ನಿಪಿ-3 ಮತ್ತು 4 ರಲ್ಲಿ ಕಾಣಿಸುತ್ತಿರುವ ಮನೆಯಲ್ಲಿ ವಾಸಿಸಲು ಯೋಗ್ಯವಲ್ಲದ ಕಾರಣ ಸದರಿ ಮನೆಯಲ್ಲಿ ನಾವು ವಾಸಿಸುತ್ತಿಲ್ಲ ಎಂದರೆ ಸರಿಯಲ್ಲ. ದಾವಾಸ್ತಿ ನನ್ನ ತಾಯಿಯ ಹೆಸರಿಗೆ ಮಂಜೂರಾಗಿರುತ್ತದೆ. ಸದರಿ ಮಂಜೂರಾತಿಯ ಕುರಿತು ನನ್ನ ಬಳಿ ಯಾವುದೇ ದಾಖಲೆ ಇಲ್ಲ ಎಂದರೆ ಸಾಕ್ಷಿ ಮೌನವಾಗಿರುತ್ತಾರೆ. ಪ್ರತಿವಾದಿಗಳು ನನಗೆ ಯಾವುದೇ ತೊಂದರೆ ಕೊಡದೆ ಇದ್ದರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)** **ಓ.ಹೇ.ಕೇ. ಸರಿ ಇದೆ.**

02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.